# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೆಚ್.ಎ.ಎಲ್ ಏರ್‌ಪೋರ್ಟ್

## ಉಪವಿಭಾಗ ಮಹದೇವಪುರ ವಲಯ, ಬೆಂಗಳೂರು

ಸಂಖ್ಯೆ.ಬಿಬಿಎಂಪಿ/ಸ.ಕಾ.ಅ/ಹೆಚ್.ಎ.ಎಲ್/ಪಿಆರ್/ 09/2022-23 ದಿನಾಂಕ: 24-01-2023

### 09 ನೇ ವಾರ್ಡ್ ಸಮಿತಿ ಸಭೆಯ ನಡಾವಳಿಗಳು.

ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮಾನ್ಯ ಆಯುಕ್ತರು ಕಛೇರಿ ಆದೇಶ ಸಂ: ಬಿ12(5)/ಪಿಆರ್/35/2020–21 ದಿನಾಂಕ:04/04/2022, ಆದೇಶದಂತೆ ಜಂಟಿ ಆಯುಕ್ತರು ಮಹದೇವಪುರ ವಲಯ ರವರ ಕಛೇರಿ ಆದೇಶ ಸಂ:ಜಂಆ/ಮವ/ಪಿ.ಎಸ್/ 1651/2022–23 ದಿನಾಂಕ: 18–07–2022 ರಂತೆ ಶ್ರೀ.ಸೋಮಯ್ಯ.ಜಿ.ಡಿ , ಸಹಾಯಕ ಅಭಿಯಂತರು (ವಾರ್ಡ್ ನಂ–91 .ಎ.ನಾರಾಯಣಪುರ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರನ್ನು ವಾರ್ಡ್ ನಂ–91 .ಎ.ನಾರಾಯಣಪುರದ ವಾರ್ಡ್ ಸಮಿತಿ ಸಭೆಯ ನೋಡಲ್ ಅಧಿಕಾರಿಯನ್ನಾಗಿ ನೇಮಿಸಿರುತ್ತಾರೆ. ಅದರಂತೆ ದಿನಾಂಕ:23–09–2022ರಂದು ನೋಡಲ್ ಅಧಿಕಾರಿಯಾದ ಶ್ರೀ.ಸೋಮಯ್ಯ.ಜಿ.ಡಿ, ಸಹಾಯಕ ಅಭಿಯಂತರು (ವಾರ್ಡ್ ನಂ–91 ಎ.ನಾರಾಯಣಪುರ) ರವರ ಅದ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗಳು ಈ ಕೆಳಕಂಡಂತೆ ಇರುತ್ತದೆ.

**ಉಪಸ್ಥಿತರು:**

| ಕ್ರಸಂ | ಹೆಸರು | ಹುದ್ದೆ |
|---|---|---|
| ಅಧಿಕಾರಿಗಳು | | |
| 1 | ಶ್ರೀ.ಜಿ.ಡಿ.ಸೋಮಯ್ಯ | ವಾರ್ಡ್ ಸಮಿತಿಯ ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ನಂ.56 ಎ.ನಾರಾಯಣಪುರ |
| 2 | ಶ್ರೀಮತಿ.ಸುವರ್ಣ ಹೆಚ್.ಸಿ | ಕಿರಿಯ ಆರೋಗ್ಯ ನಿರೀಕ್ಷಕರು |
| 3 | ಶ್ರೀ. ಮೋಹಿನ್ | ಆರೋಗ್ಯಾಧಿಕಾರಿ |
| 4 | ಶ್ರೀ. ಶಂಕರ್ | ಗ್ಯಾಂಗ್ ಮೆನ್ ವಾರ್ಡ್ ನಂ–56 |
| 5 | ಶ್ರೀ.ಎ.ಗಣೇಶ್ | ಗ್ಯಾಂಗ್ ಮೆನ್ ವಾರ್ಡ್ ನಂ–56 |
| 6 | ಶ್ರೀ.ರಾಜನ್ ಹೆಚ್.ಎಸ್ | ಸಹಾಯಕ ಅಭಿಯಂತರರು, ಬಿ.ಡಬ್ಲೂ.ಎಸ್.ಎಸ್.ಬಿ |
| 7 | ಶ್ರೀ.ಮಹೇಶಾ.ಎಸ್ | ಸಹಾಯಕ ಅಭಿಯಂತರರು, ಬೆಸ್ಕಾಂ |
| 8 | ಶ್ರೀ.ಮಹಂತೇಶಗೌಡ | ಪಶುಪಾಲನಾ ವಿಭಾಗ |
| ಸಂಘದ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು | | |
| 9 | ಶ್ರೀ.ಸುರೇಶ್.ವಿ | ಎ–ನಾರಾಯಣಪುರ |
| 10 | ಶ್ರೀಮತಿ.ಮಂಗಳ | ಎ–ನಾರಾಯಣಪುರ |
| 11 | ಶ್ರೀ.ಸುನಿಲ್ | ಎ–ನಾರಾಯಣಪುರ |
| 12 | ಶ್ರೀ. ಪ್ರಧೀಪ್ | ಎ–ನಾರಾಯಣಪುರ |
| 13 | ಶ್ರೀಮತಿ. ವಸಂತ | ಎ–ನಾರಾಯಣಪುರ |
| 14 | ಶ್ರೀಮತಿ. ಆದಿ ಲಕ್ಷ್ಮಿ | ಎ–ನಾರಾಯಣಪುರ |
| 15 | ಶ್ರೀ. ಹುಮಾಯ್ | ಎ–ನಾರಾಯಣಪುರ |
| 16 | ಶ್ರೀ.ರಾಜ | ಎ–ನಾರಾಯಣಪುರ |
| 17 | ಶ್ರೀ.ನಾಗರಾಜ | ಎ–ನಾರಾಯಣಪುರ |
| 18 | ಶ್ರೀ.ಟಿ.ರಾಜ | ಎ–ನಾರಾಯಣಪುರ |
| 19 | ಶ್ರೀ.ಜಿ.ಬಾಬು | ಎ–ನಾರಾಯಣಪುರ |

| | | |
|---|---|---|
| 21 | ಶ್ರೀ.ಜಿ.ಲೋಕೇಶ್ | ಎ–ನಾರಾಯಣಪುರ |
| 22 | ಶ್ರೀ.ಪ್ರದೀಪ್ | ಎ–ನಾರಾಯಣಪುರ |
| 23 | ಶ್ರೀ.ರಮಣಂ | ಎ–ನಾರಾಯಣಪುರ |
| 24 | ಶ್ರೀ.ಗೋವಿಂದಪ್ಪ | ಎ–ನಾರಾಯಣಪುರ |

**ನಡಾವಳಿ 1. ಕೋವಿಡ್–19ರ ಸಾಂಕ್ರಮಿಕ ರೋಗಕ್ಕೆ ಸಂಬಂಧಿಸಿದಂತೆ, ಸೊಂಕು ಹರಡುವುದನ್ನು ತಡೆಗಟ್ಟುವ ಸಂಬಂಧ ತೆಗೆದುಕೊಳ್ಳಬೇಕಾದ ಮುಂಜಾಗೃತ ಕ್ರಮಗಳ ಬಗ್ಗೆ.**

ಆರೋಗ್ಯಾಧಿಕಾರಿಗಳು ಮಾತನಾಡಿ ಎ.ನಾರಾಯಣಪುರ ವಾರ್ಡ್ ಏರಿಯಾಗಳಲ್ಲಿ ಕೋವಿಡ್ ಬೋಸ್ಟರ್ ಡೋಸ್ ವ್ಯಾಕ್ಸಿನ್ ಕ್ಯಾಂಪ್‌ಗಳನ್ನು 25–01–2023 ರಂದು ಹಮ್ಮಿಕೊಂಡಿರುವುದಾಗಿ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಶುಗರ್ ತಪಾಸಣೆ ಯಂತ್ರವನ್ನು ನೀಡಬೇಕೆಂದು ವೈದಾಧಿಕಾರಿಗಳು ತಿಳಿಸಿರುತ್ತಾರೆ.

ಕ್ರಮ: ವಲಯ ಆರೋಗ್ಯಾಧಿಕಾರಿಗಳು ಮಹದೇವಪುರ ವಲಯ

**ನಡಾವಳಿ 2. ವಾರ್ಡ್ ವ್ಯಾಪ್ತಿಯಲ್ಲಿ ಕುಡಿಯುವ ನೀರು ಹಾಗೂ ಒಳಚರಂಡಿಗಳ ಸಂಬಂಧಿಸಿದ ವಿಷಯಗಳ ಬಗ್ಗೆ.**

ವಾರ್ಡ್ ವ್ಯಾಪ್ತಿಯಲ್ಲಿ ಸಾರ್ವಜನಿಕರು ಮಾತಾನಾಡಿ ಪ್ರಸ್ತುತ ಕುಡಿಯುವ ನೀರನ್ನು ಶುಕ್ರವಾರ ಮತ್ತು ಭಾನುವಾರದಂದು ಬಿಡುತ್ತಿದ್ದು ಇದರಿಂದ ಉಳಿದ ದಿನಗಳಲ್ಲಿ ನೀರಿನ ಸಮಸ್ಯೆ ಹೆಚ್ಚಾಗುತ್ತಿರುವ ಕಾರಣ 2 ದಿನಕ್ಕೆ ಒಮ್ಮೆ ನೀರಿನ ಬಿಡಬೇಕೆಂದು ಮತ್ತು ವಿವೇಕಾನಂದ ಬೀದಿಯಲ್ಲಿ, ನೆಹರು ಬೀದಿ ಚೇಂಬರ್‌ಗಳ ಎತ್ತರವು ಚೇಂಬರ್‌ಗಳು ರಸ್ತೆಯ ಮೇಲ್ಮಮೈಗಿಂತ ಎತ್ತರವಿದ್ದು ಇವುಗಳ ಎತ್ತರವನ್ನು ರಸ್ತೆಯ ಮೇಲ್ಮಮೈಗೆ ಸರಿಹೊಂದುವಂತೆ ನಿರ್ಮಿಸಬೇಕೆಂದು ಸಾರ್ವಜನಿಕರು ಮನವಿ ಮಾಡಿಕೊಂಡಿರುತ್ತಾರೆ.

ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು,
ಬಿ.ಡಬ್ಲೂ.ಎಸ್.ಎಸ್.ಬಿ

**ನಡಾವಳಿ 3. ವಾರ್ಡ್‌ನಲ್ಲಿ ಘನತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ಬಗ್ಗೆ.**

ವಾರ್ಡ್ ವ್ಯಾಪ್ತಿಯಲ್ಲಿ ಬ್ಲಾಕ್ ಸ್ಪಾಟ್‌ಗಳು ಹೆಚ್ಚಾಗುತ್ತಿದ್ದು, ಉದಯನಗರ ಫಾತಿಮಾ ಸ್ಕೂಲ್ ಹತ್ತಿರ ತುಂಬ ಕಸ ಇದೆ ಮತ್ತು ಮೆಡೋನಾ ಸ್ಕೂಲ್ ಕಡೆಗೆ ಹಾಗೂ ರಾಮಾಂಜಿನಪ್ಪ ಬಡಾವಣೆಯ ಅಡ್ಡರಸ್ತೆಗಳಲ್ಲಿ ಪೌರಕಾರ್ಮಿಕರು ಬರುತ್ತಿಲ್ಲವೆಂದು ಸಾರ್ವಜನಿಕರು ತಿಳಿಸಿದರು.

ಕ್ರಮ: ಹಿರಿಯ ಆರೋಗ್ಯ ನಿರೀಕ್ಷಕರು ಮತ್ತು ಕಿರಿಯ ಆರೋಗ್ಯ ನಿರೀಕ್ಷಕರು

**ನಡಾವಳಿ 4.ವಾರ್ಡ್‌ನ ವಿವಿಧ ಕಾಮಗಾರಿಗಳ ಅಭಿವೃದ್ಧಿ ಕಾರ್ಯಗಳ ಬಗ್ಗೆ.**

ವಾರ್ಡ್‌ನ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಚರ್ಚಿಸಲಾಗಿದ್ದು.ವಾರ್ಡ್ ವ್ಯಾಪ್ತಿಯ ಪ್ಲೇಗಮ್ಮ ದೇವಸ್ಥಾನದ ರಸ್ತೆ, ಮಡೋನಾ ಸ್ಕೂಲ್ ರಸ್ತೆ ಮತ್ತು ನೆಹರು ಬಡಾವಣೆಗಳಲ್ಲಿ ರಸ್ತೆ ಕಾಮಗಾರಿಯನ್ನು ಬೇಗ ಪೂರ್ಣಗೊಳಿಸಬೇಕೆಂದು ಸಾರ್ವಜನಿಕರು ಒತ್ತಯಿಸಿದರು, ಅದರಂತೆ ಸಾರ್ವಜನಿಕರ ಸಮಸ್ಯೆಗಳನ್ನು ಬಗೆಹರಿಸುವಂತೆ ಸಂಬಂಧಪಟ್ಟ ಅಭಿಯಂತರರಿಗೆ ಸೂಚಿಸಲಾಯಿತು.

ಕ್ರಮ: ಸಹಾಯಕ ಅಭಿಯಂತರರು ವಾರ್ಡ್ 91

**<u>ನಡಾವಳಿ 5.</u> ವಿದ್ಯುತ್ ಸರಬರಾಜು(ಬೆಸ್ಕಾಂ)ಗೆ ಸಂಬಂಧಿಸಿದ ವಿಷಯದ ಬಗ್ಗೆ.**

ವಾರ್ಡ್ ವ್ಯಾಪ್ತಿಯಲ್ಲಿ ಆರ್.ಆರ್.ಬೇಕರಿ ರಸ್ತೆಯಲ್ಲಿ ವಿದ್ಯುತ್ ಹಳೆ ಕಂಬವನ್ನು ತೆಗೆದು ಹೊಸ ಕಂಬವನ್ನು ಅಳವಡಿಸಬೇಕೆಂದು ಮತ್ತು ಉದಯಶಂಕರ್ ರಸ್ತೆ ಹಾಗೂ ನೇತ್ರಾವತಿ ಎ.ಬಿ. ಕೇಬಲ್‌ನ್ನು ಅಳವಡಿಸಬೇಕೆಂದು ಕೋರಿರುತ್ತಾರೆ.ಅದರಂತೆ ಕೊಡಲೇ ಕ್ರಮ ವಹಿಸಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಲಾಯಿತು.

ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು(ಬೆಸ್ಕಾಂ)
ಬೆನ್ನಿಗಾನಹಳ್ಳಿ ವಿಭಾಗ

ನೋಡಲ್ ಅಧಿಕಾರಿ ಹಾಗೂ ಸದಸ್ಯ ಕಾರ್ಯದರ್ಶಿ
ಸಹಾಯಕ ಅಭಿಯಂತರರು ವಾರ್ಡ್ ನಂ.91
ಎ.ನಾರಾಯಣಪುರ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು:-

1. ಮಾನ್ಯ ಜಂಟಿ ಆಯುಕ್ತರು, ಮಹದೇವಪುರ ವಲಯ ರವರ ಮಾಹಿತಿಗಾಗಿ ರವಾನಿಸಿದೆ.
2. ಮುಖ್ಯ ಅಭಿಯಂತರರು, ಮಹದೇವಪುರ ವಲಯ ರವರ ಮಾಹಿತಿಗಾಗಿ ರವಾನಿಸಿದೆ.
3. ಕಛೇರಿ ಪ್ರತಿ.